ಕ್ರ.ಕಸಾ/ಅಂಚಿಂಮಂಕಮ್ಮಟ/2017–18 ದಿನಾಂಕ 12–05–2017

ಪ್ರಕಟಣೆಯ ಕೃಪೆಗಾಗಿ

"ಡಾ. ಬಿ. ಆರ್. ಅಂಬೇಡ್ಕರ್ ಚಿಂತನ – ಮಂಥನ"
(ರಾಷ್ಟ್ರದ ಅಭಿವೃದ್ಧಿಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ವಿಚಾರಧಾರೆ ಕುರಿತ ಎರಡು ದಿನಗಳ ಕಮ್ಮಟ)

## ಅರ್ಜಿ ಅಹ್ವಾನ

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ಸಹಯೋಗದಲ್ಲಿ 2017ರ ಜೂನ್ ಮತ್ತು ಜುಲೈ ತಿಂಗಳಲ್ಲಿ ವಿಶೇಷ ಘಟಕ / ಗಿರಿಜನ ಉಪಯೋಜನೆ / ಸಾಮಾನ್ಯ ಯೋಜನೆಯಡಿ ಮೈಸೂರು ವಿಭಾಗ (ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಒಳಗೊಂಡಂತೆ) "ಡಾ. ಬಿ. ಆರ್. ಅಂಬೇಡ್ಕರ ಚಿಂತನ – ಮಂಥನ" ಕುರಿತ ವಸತಿ ಸಹಿತ ಎರಡು ದಿನಗಳ ಕಮ್ಮಟವನ್ನು ನಡೆಸಲು ಉದ್ದೇಶಿಸಿದೆ. ಆಸಕ್ತ ಅಭ್ಯರ್ಥಿಗಳು www.karnatakasahithyaacademy.org ಹಾಗೂ www.uni-mysore.ac.in ಯಿಂದ ವಿವರಗಳನ್ನು ಪಡೆದು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 25–05–2017.

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – 560 002

"ಡಾ. ಬಿ. ಆರ್. ಅಂಬೇಡ್ಕರ್ ಚಿಂತನ – ಮಂಥನ"

(ಎರಡು ದಿನಗಳ ಕಮ್ಮಟ, ವಿಶೇಷ ಘಟಕ / ಗಿರಿಜನ ಉಪಯೋಜನೆ / ಸಾಮಾನ್ಯ ಯೋಜನೆ)

ಮೈಸೂರು ವಿಭಾಗ

ಅರ್ಜಿ ನಮೂನೆ

| | | |
|---|---|---|
| 1 | ಅಭ್ಯರ್ಥಿಯ ಹೆಸರು, ವಾಸಸ್ಥಳ, ಜಿಲ್ಲೆ | |
| 2 | ಭಾವಚಿತ್ರ | |
| 3 | ವಯಸ್ಸು (ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಲಗತ್ತಿಸಬೇಕು) | |
| 4 | ಜಾತಿ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಜಾತಿ ಪ್ರಮಾಣಪತ್ರ ಲಗತ್ತಿಸುವುದು ಕಡ್ಡಾಯ) | |
| 5 | ಉದ್ಯೋಗ | |
| 6 | ಸಂಪರ್ಕ ವಿಳಾಸ (ಮೊಬೈಲ್ ಸಂಖ್ಯೆ / ದೂರವಾಣಿ ಸಂಖ್ಯೆ/ ಈ-ಮೇಲ್ ವಿಳಾಸ | |
| 7 | ಯಾವುದಾದರೂ ಕೃತಿ / ಲೇಖನಗಳನ್ನು ಪ್ರಕಟಿಸಿದ್ದಲ್ಲಿ ವಿವರ | |
| 8 | ಕರ್ನಾಟಕ ಸಾಹಿತ್ಯ ಅಕಾಡೆಮಿಯ ಯಾವುದಾದರು ಕಮ್ಮಟದಲ್ಲಿ ಭಾಗವಹಿಸಿದಲ್ಲಿ ವಿವರ | |
| 9 | ಇತರ ಆಸಕ್ತಿಗಳು | |

ಅಭ್ಯರ್ಥಿಯ ಸಹಿ

ಕ್ರ.ಕಸಾ/ಅಂಚಿಂಮಂಕಮ್ಮಟ/2017–18 ದಿನಾಂಕ 04–05–2017

# ಪ್ರಕಟಣೆ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ಸಹಯೋಗದಲ್ಲಿ 2017ರ ಜೂನ್ ಮತ್ತು ಜುಲೈ ತಿಂಗಳಲ್ಲಿ ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ / ಸಾಮಾನ್ಯ ಯೋಜನೆಯಡಿಯಲ್ಲಿ ಆಸಕ್ತ ಅಭ್ಯರ್ಥಿಗಳಿಗಾಗಿ ಮೈಸೂರು ವಿಭಾಗ ಮಟ್ಟದಲ್ಲಿ ವಸತಿ ಸಹಿತ ಎರಡು ದಿನಗಳ "ಡಾ. ಬಿ. ಆರ್. ಅಂಬೇಡ್ಕರ ಚಿಂತನ – ಮಂಥನ ಕುರಿತ ಕಮ್ಮಟ (ರಾಷ್ಟ್ರದ ಅಭಿವೃದ್ಧಿಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ವಿಚಾರಧಾರೆ ಕುರಿತ ಕಮ್ಮಟ) ವನ್ನು ಮೈಸೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದೆ.

- ಮೈಸೂರು ವಿಭಾಗದ ಯಾವುದೇ ಜಿಲ್ಲೆಗೆ (ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು) ಸೇರಿರುವ 18 ವರ್ಷದಿಂದ 40 ರ ವಯೋಮಿತಿಯಲ್ಲಿರುವ ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು ಹಾಗು ಆಸಕ್ತಿಯುಳ್ಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- ವಯಸ್ಸಿಗೆ ಸಂಬಂಧಿಸಿದಂತೆ, ಎಸ್. ಎಸ್. ಎಲ್. ಸಿ. ಅಂಕಪಟ್ಟಿಯ ದೃಢೀಕೃತ ಪಟ್ಟಿಯನ್ನು ಲಗತ್ತಿಸಬೇಕು.
- ಜಾತಿಗೆ ಸಂಬಂಧಿಸಿದಂತೆ ದೃಢೀಕೃತ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕು.
- ಆಯ್ಕೆಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಎರಡು ದಿನಗಳು ಶಿಬಿರದಲ್ಲೇ ವಾಸ್ತವ್ಯ ಮಾಡಬೇಕು.
- ಅರ್ಜಿಯನ್ನು ಒಳಗೊಂಡ ಲಕೋಟೆಯ ಮೇಲ್ಭಾಗದಲ್ಲಿ ಕಡ್ಡಾಯವಾಗಿ "ಡಾ. ಬಿ. ಆರ್. ಅಂಬೇಡ್ಕರ್ ಚಿಂತನ – ಮಂಥನ, ಮೈಸೂರು ವಿಭಾಗ ಕಮ್ಮಟಕ್ಕೆ" ಅರ್ಜಿ ಎಂದು ನಮೂದಿಸಿರಬೇಕು.
- ಆಯ್ಕೆಯಾದ ಅಭ್ಯರ್ಥಿಗಳಿಗೆ ಶಿಬಿರದ ಸ್ಥಳಕ್ಕೆ ಬಂದು ಹೋಗಲು ರಾಜಹಂಸದ / ಸಾಮಾನ್ಯ ರೈಲ್ವೆ ದರವನ್ನು ನೀಡಲಾಗುವುದು. ಹಾಗೂ ಎರಡು ದಿನಗಳು ಊಟ, ಉಪಹಾರದ ವ್ಯವಸ್ಥೆಯನ್ನು ಮಾಡಲಾಗುವುದು.
- ಆಸಕ್ತ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್ ಸೈಟ್ ನಲ್ಲಿ ಪಡೆದುಕೊಳ್ಳಬಹುದು.
- ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಜೂನ್ ಮೊದಲ ವಾರದಲ್ಲಿ ಅಕಾಡೆಮಿಯ ವೆಬ್ ಸೈಟ್ www.karnatakasahithyaacademy.org ಪ್ರಕಟಿಸಲಾಗುವುದು.
- ಆಯ್ಕೆಯಲ್ಲಿ ಅಕಾಡೆಮಿಯ ತೀರ್ಮಾನವೇ ಅಂತಿಮ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 25–05–2017
- ಕಡ್ಡಾಯವಾಗಿ ಅರ್ಜಿಯಲ್ಲಿ ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆ, ಈ–ಮೇಲ್ ವಿಳಾಸ ನಮೂದಿಸಿರಬೇಕು. ಇಲ್ಲದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಈ ಕೆಳಕಂಡ ವಿಷಯಗಳನ್ನು ಅಭ್ಯಾಸ ಮಾಡಿಯೇ ಕಮ್ಮಟಕ್ಕೆ ಹಾಜರಾಗಬೇಕು.
    1. ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಶಿಕ್ಷಣ
    2. ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಕಾರ್ಮಿಕ ಸಮುದಾಯ
    3. ಡಾ. ಬಿ. ಆರ್. ಅಂಬೇಡ್ಕರ್ ಮತ್ತು ರೈತ ಸಮುದಾಯ

4. ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಮಹಿಳಾ ಸಮುದಾಯ
5. ಡಾ. ಬಿ. ಆರ್. ಅಂಬೇಡ್ಕರ್ – ವರ್ಣ, ಜಾತಿ ಮತ್ತು ಅಸ್ಪೃಶ್ಯತೆ
6. ಡಾ. ಬಿ. ಆರ್. ಅಂಬೇಡ್ಕರ್ – ಸಾಮಾಜಿಕ ವಿಮೋಚನೆ
7. ಡಾ. ಬಿ. ಆರ್. ಅಂಬೇಡ್ಕರ್ – ಧಾರ್ಮಿಕ ಚಿಂತನೆಗಳು
8. ಡಾ. ಬಿ. ಆರ್. ಅಂಬೇಡ್ಕರ್ – ಆರ್ಥಿಕ ಚಿಂತನೆಗಳು
9. ಡಾ. ಬಿ. ಆರ್. ಅಂಬೇಡ್ಕರ್ – ನೀರಾವರಿ ಕುರಿತು ಚಿಂತನೆಗಳು
10. ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಪ್ರಜಾಪ್ರಭುತ್ವದ ಚಿಂತನೆಗಳು
11. ಡಾ. ಬಿ. ಆರ್. ಅಂಬೇಡ್ಕರ್ ಮತ್ತು ತಳಸಮುದಾಯಗಳ ಹಕ್ಕು
12. ಡಾ. ಬಿ. ಆರ್. ಅಂಬೇಡ್ಕರ್ ರಾಷ್ಟ್ರೀಯತೆ ಮತ್ತು ಪ್ರಬುದ್ಧ ಭಾರತದ ಕಲ್ಪನೆ

- ಅರ್ಜಿಯನ್ನು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕು

ಡಾ. ಎಸ್. ನರೇಂದ್ರಕುಮಾರ್
ಸಂಯೋಜನಾಧಿಕಾರಿಗಳು
ಡಾ. ಬಿ. ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ
ಮೈಸೂರು 570 006
ಮೊಬೈಲ್ – 9481818439

**ಡಾ. ಎಸ್. ನರೇಂದ್ರಕುಮಾರ್**
ಸಂಯೋಜನಾಧಿಕಾರಿಗಳು
ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ
ಹಾಗೂ ವಿಸ್ತರಣ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ

**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕರ್ನಾಟಕ ಸರ್ಕಾರ

**ಅಶೋಕ್.ಎನ್.ಚಲವಾದಿ**
ಆಡಳಿತಾಧಿಕಾರಿಗಳು
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕರ್ನಾಟಕ ಸರ್ಕಾರ